**Ex.No. 8/2018**
**ಡಿ.ಡಬ್ಲ್ಯು–02**

**<u>ಸಾಕ್ಷಿಯನ್ನು ದಿನಾಂಕಃ 02.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ. ಬಿ.ಎಲ್.ಟಿ. ವಕೀಲರಿಂದಃ</u>**

ದಾವಾ / ಅರ್ಜಿ ಆಸ್ತಿಯ ಜಂಜರ್ ನಂ. 4 ಆಗಿರಬಹುದು. ಸಾಕ್ಷಿ ಮುಂದುವರೆದು ನಿಖರವಾಗಿ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಅದರ ಅಳತೆ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ಚೆಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ – ಮಹದೇವಪ್ಪರವರ ಮನೆ ಮತ್ತು ಜಮೀನು, ಪಶ್ಚಿಮ ಮತ್ತು ಉತ್ತರಕ್ಕೆ – ರಸ್ತೆ ಹಾಗು ದಕ್ಷಿಣಕ್ಕೆ – ಲಕ್ಷ್ಮಮ್ಮ ಹಾಗು ತಿಮ್ಮನಾಯಕರವರ ಮನೆ ಇರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ಆಸ್ತಿಯ ಅಕ್ಕ–ಪಕ್ಕ ನನಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ. ಡಿಕ್ರಿದಾರರ ಮನೆಯ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ಪೂರ್ವಕ್ಕೆ – ಮಹದೇವಪ್ಪರವರ ಮನೆ ಹಾಗು ಜಮೀನು, ಪಶ್ಚಿಮ ಹಾಗು ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ – ಲಕ್ಷ್ಮಮ್ಮ ಹಾಗು ತಿಮ್ಮನಾಯಕರವರ ಮನೆ ಇರುತ್ತದೆ. ಡಿಕ್ರಿದಾರರು ಸದರಿ ಮನೆಯಲ್ಲಿ ನಾನು ಹುಟ್ಟುವ ಪೂರ್ವದಿಂದಲೂ ವಾಸ ಮಾಡಿಕೊಂಡು ಬಂದಿರುತ್ತಾರೆ. ಸದರಿ ಡಿಕ್ರಿದಾರರ ಮನೆಯ ಪೂರ್ವಕ್ಕೆ ಇರುವ ತೆಂಗಿನ ಮರವನ್ನು ಡಿಕ್ರಿದಾರರೇ ಹಾಕಿರುವುದಾಗಿ ಹಿಂದಿನಿಂದಲೂ ಎಲ್ಲರೂ ಹೇಳಿಕೊಂಡು ಬಂದಿರುತ್ತಾರೆ. ಡಿಕ್ರಿದಾರರ ಆಸ್ತಿಯ ಚೆಕ್ಕುಬಂದಿ ಒಳಗೆ ಸದರಿ ತೆಂಗಿನಮರ ಬರುತ್ತದೆಂದರೆ ಸಾಕ್ಷಿಯು ಅದರ ಅಳತೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಡಿಕ್ರಿದಾರರು ತೀರ್ಪುಋಣಿದಾರರಾದ ಮಹದೇವಪ್ಪರವರ ವಿರುದ್ಧ ಸುಮಾರು 20 ವರ್ಷದ ಹಿಂದೆ ದಾವೆ ಹೂಡಿರುತ್ತಾರೆ. ಸದರಿ ದಾವೆಯ ತೀರ್ಪು ಅಥವಾ ಇನ್ನಾವುದೇ ದಾಖಲೆಯನ್ನು

ನಾನು ನೋಡಿರುವುದಿಲ್ಲ. ಸದರಿ ದಾವೆಯ ತೀರ್ಪಿನ ವಿರುದ್ಧ ಮೇಲ್ಮನವಿ ಹೂಡಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ಮೇಲ್ಮನವಿಯಲ್ಲಿ ಡಿಕ್ರಿದಾರರ ಪರ ತೀರ್ಪು ಆಗಿರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತೀರ್ಪುಋಣಿದಾರರು ಡಿಕ್ರಿದಾರರಿಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲವೆಂಬ ವಿಚಾರವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಸದರಿ ವಿವಾದಾಸ್ಪದ ತೆಂಗಿನಮರದ ವಿಚಾರದಲ್ಲಿ ಇತ್ತೀಚೆಗೆ ಡಿಕ್ರಿದಾರರು ಹಾಗು ತೀರ್ಪುಋಣಿದಾರರ ನಡುವೆ ಯಾವುದೇ ಜಗಳ ವಗೈರೆ ಆಗದೇ ಇದ್ದು ಆ ಹಿನ್ನೆಲೆಯಲ್ಲಿ ತೀರ್ಪುಋಣಿದಾರರು ಡಿಕ್ರಿದಾರರಿಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತೇನೆ. ಹಿಂದಿನ ಅಸಲು ದಾವೆಯಲ್ಲಿ ನಾನು ತೀರ್ಪುಋಣಿದಾರರ ಪರವಾಗಿ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ತೀರ್ಪುಋಣಿದಾರರು ಹಾಗು ನಾನು ಒಂದೇ ಜನಾಂಗದವರು ಎಂದರೆ ಸರಿ. ಈ ಅರ್ಜಿಯ ಯಾವುದೇ ವಿದ್ಯಮಾನಗಳು ನನಗೆ ಗೊತ್ತಿಲ್ಲದೇ ಇದ್ದಾಗ್ಯೂ ಸಹ ತೀರ್ಪುಋಣಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**